ಎಂದುಕೊಳ್ಳುತ್ತ ನಿರಾಳವಾಗಿ ನಿದ್ದೆ ಹೋದಾಗ ರೈಲು ದಾವಣಗೆರೆ ದಾಟಿ ಮುನ್ನುಗ್ಗುತ್ತಿತ್ತು.

ನಸುಕಿನಲ್ಲಿ ಮತ್ತದೇ ಕನಸು. ಅದೇ ವ್ಯಕ್ತಿ. ರೈಲಿನ ಹಳಿಗಳ ಮೇಲೆ ನಿಂತು ಅಬ್ಬರಿಸುತ್ತಿದ್ದಾನೆ. ಗಿರಿಜಾ ಮೀಸೆ ಠಾಕೋ ಠೀಕಾಗಿ ಮೇಲೆ ಕೆಳಗೆ ಆಡುತ್ತಿದೆ. ಕಂಗಳಲ್ಲಿ ಕ್ರೌರ್ಯ ಚೆಲ್ಲುತ್ತ, “ತಯಾರಾಗೀಯಿಲ್ಲೋ?...” ಎಂದು ಕೇಳಿದ. “ನಾ ತಯಾರಾಗದಿದ್ರ ನೀ ಏನ ಬಿಡ್ತೀಯಾ? ಬೇಕಾದಷ್ಟು ಬೇಡಿಕೊಂಡ್ರೂ ಬಿಡೂದುಲ್ಲ. ಕಾಯೋ ದೇವರು ಕೊಲ್ಲಲಿಕ್ಕೆ ನಿಂತರ ಬೇಡೋದು ಯಾರಿಗೆ? ಹಂಗ ನೋಡಿದ್ರ ಹುಟ್ಟಿ ಜೀವನ ಸುರು ಆದಾಗಿಂದ ಸಾವಿನ ಕಡೆ ಪ್ರಯಾಣ ಶುರುವಾಗ್ತದ. ಒಂದೊಂದು ದಿನಾನೂ ನಿನಗ ಹತ್ತರ ಆಗ್ತನ ಹೋಗ್ತೇವಿ. ದಿವ್ಸ ಮುಗೀತನ ಬರ್ತಾವ. ಪೆಟಿಗಿ ಕಟ್ಟೋದನ... ಅದಕ್ಕ ದಿನಾ ಅಂಜಿ ಅಂಜಿ ಸಾಯೋಕಿಂತಾ ಒಮ್ಮೆ ಸಾಯೋದ ಛೊಲೊ. ಬಾ... ಯಾವಾಗ ಬರ್ತಿ ಬಾ. ಹೆಂಗ ಬರ್ತಿ ಬಾ... ಬಂದಬಿಡು... ನಿಶ್ಚಿಂತ್ಯಾಗಿ ಹೋಗ್ತದ” ಎಂದಳು. ಕಣ್ಣು ಕಿರಿದು ಮಾಡಿ ತೀಕ್ಷ್ಣವಾಗಿ ನೋಡಿದವ ಎರಡು ಹೆಜ್ಜೆ ಮುಂದೆ ಬಂದು, “ಹ್ಞಂ...” ಎಂದು ಕತ್ತು ತಿರುಗಿಸಿ ಮಾಯವಾದ. ಎಚ್ಚರವಾದಾಗ ರೈಲು ಯಶವಂತಪುರದಲ್ಲಿತ್ತು. ಅವಳ ಮುಖದ ಮೇಲೊಂದು ಸುಂದರ ಮಂದಹಾಸ. ಎದುರಿಗೆ ಕರೆದೊಯ್ಯಲು ಬಂದ ಸಂಜಯನಿದ್ದ. ಅಂದು ರಾತ್ರಿ ಯಾವ ಲೇಪನವೂ ಇಲ್ಲದೇ ಹಾಯಾಗಿ ಮಲಗಿದಳು. ಬಯಕೆ ಬಾಯಾರಿತ್ತು. ತಿಂಗಳುಗಳ ದಾಹ ಪೂರ್ತಿಯಾಗಿತ್ತು.

ಈ ಕತೆ ನಡೆದು ಇಪ್ಪತ್ತೈದು ವರ್ಷಗಳು ಉರುಳಿವೆ. ನೇತ್ರಾ ಮದುವೆಯಾಗಿ ಮಕ್ಕಳೊಂದಿಗೆ ಗಂಡನ ಜೊತೆಯಲ್ಲಿ ಅಮೆರಿಕದಲ್ಲಿದ್ದಾಳೆ. ಆಶಿಶ ಒಳ್ಳೆಯ ಸಾಫ್ಟ್‌ವೇರ್ ಕಂಪನಿಯಲ್ಲಿ ಉನ್ನತ ಹುದ್ದೆಯಲ್ಲಿದ್ದಾನೆ. ಅವನ ಹೆಂಡತಿ ಮುಗ್ಧಾ ಕೂಡ ಸಾಫ್ಟ್‌ವೇರ್ ಕಂಪನಿಯಲ್ಲೇ ಉದ್ಯೋಗಿ. ಇಬ್ಬರೂ ಮೊಮ್ಮಕ್ಕಳು ಸಂಜಯ, ಸುಜಾತರ ಕೈಯಲ್ಲೇ ಬೆಳೆಯುತ್ತ “ಅಜ್ಜಿ, ಅಜ್ಜಾ” ಎನ್ನುತ್ತ ಅವರ ಸುತ್ತ ಸುತ್ತುತ್ತಾರೆ. ಸಂಜಯನಿಗೀಗ ಎಪ್ಪತ್ತೆಂಟು. ಎಲ್ಲಾ ಮಹಾರೋಗಗಳನ್ನೂ ಸಾಕಿಕೊಂಡಿದ್ದಾನೆ. ಆದರೆ ಸ್ವಲ್ಪಮಟ್ಟಿಗೆ ಓಡಾಡುತ್ತಾನೆ. ಸುಜಾತಳಿಗೆ ಶುಗರ್ ಶುರುವಾಗಿದ್ದು ಕಾಲುನೋವು ಕಾಡುತ್ತದೆ. ಮನೆ ಮಟ್ಟಿಗೆ ಓಡಾಡುವುದೂ ಕಷ್ಟವೇ. “ಅಜ್ಜೀ... ನಿನ್ನ ಕನಸಿನ್ಯಾಗ ಯಮದೂತ ಬರ್ತಿದ್ನಂತ...” ಎಂದು ಮೊಮ್ಮಗ ಒಂದು ದಿನ ಕೇಳಿದ್ದ. “ಹ್ಞೂಂ... ಬರ್ತಿದ್ದ. ಈಗ ಲಗೂ ಬಾರಪಾ... ಹಾಸಿಗಿ ಹಿಡಿಯೋಕಿಂತಾ ಮದ್ಲ ಕರಕೊಂಡು ಹೋಗಪಾ ಅಂದರ ಬರವಲ್ಲ... ವಟ್ಟ ಬರವಲ್ಲ” ಎಂದು ನಗಾಡುತ್ತ ಹೇಳಿದಳು ಸುಜಾತಜ್ಜಿ. “ಆವಾಗ ಅಂವಾ ಬರಬಾರ್ದಂತ ನಾವೆಲ್ಲಾ ಕೂಡಿ ಭಾಳ ಶಾಂತಿ, ಹೋಮ, ಉಪಾಸ, ವ್ರತ, ಹರಕಿ ಎಲ್ಲಾ ಮಾಡಕೊಂಡ್ವಿ. ಅದಕ್ಕ ಅಂವ ಹೋಗಿಬಿಟ್ಟ.” ಎಂದು ಸಂಜಯ ನಕ್ಕ. ಮೊಮ್ಮಗ, “ಹೌದಜ್ಜಿ... ನಾವು ಆಟಾ ಆಡೋಮುಂದ ‘ಟೈಮ್ಸ್‌ಪ್ಲೀಸ್’ ಅಂತ ತೊಗೋತೇವಲಾ.. ಹಂಗ ಅಂವಾನೂ ‘ಟೈಮ್ಸ್‌ಪ್ಲೀಸ್’ ತೊಗೊಂಡು ಹೋಗ್ಯಾನ. ಮ್ಯಾಲೆ ಜಾಗಾ ಖಾಲಿ ಆದಾಗ ಬರ್ತಾನೇಳು...” ಎನ್ನುತ್ತ ತನ್ನ ಪುಟ್ಟ ಸೈಕಲ್‌ನ್ನು ‘ಟ್ರೆನ್... ಟ್ರೆನ್’ ಎನಿಸುತ್ತ ಆಡಲು ಹೋದ. ಒಳಗೆ ಸೊಸೆ ಹುಳ್ಳಗೆ ನಕ್ಕಳು.

## ಮಧುರಾ ಕರ್ಣಮ್

ಲೇಖಕಿ ಮಧುರಾ ಬೆಳಗಾವಿಯವರು. ವಿದ್ಯಾಭ್ಯಾಸ ಬಿ.ಎಸ್ಸಿ., ಎಲ್‌ಎಲ್‌ಬಿ. ಕತೆ, ಹಾಸ್ಯಬರಹಗಳನ್ನು ಬರೆದಿದ್ದಾರೆ. ‘ಮರಳಿ ಬಂದನಾ ವಸಂತ’, ‘ಋಣ’, ‘ಅವಳ ಭಾವಗಳ ಸುತ್ತ’, ‘ಗುಂಡಪುರಾಣ’, ‘ಜೀವಧಾರಾ... ನಿರಂತರಾ...’, ‘ಆಕ್ರಮಣ’ ಅವರ ಪ್ರಕಟಿತ ಕೃತಿಗಳು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.